CW.14 PW.1

## ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ

# CC No.821/2018

| | |
|---|---|
| ಸಾಕ್ಷಿದಾರರ ಹೆಸರು | ದೀಪಕ್ ಆರ್ |
| ತಂದೆಯ ಹೆಸರು | ರಾಮು |
| ವಯಸ್ಸು | 41 ವರ್ಷ |
| ವೃತ್ತಿ | ಪಿ ಐ, ಜಯನಗರ ಪೋಲೀಸ್ ಠಾಣೆ |
| ವಿಳಾಸ | ಬೆಂಗಳೂರು |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 11.12.2025 |

**ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-**

ಆರೋಪಿತರನ್ನು ನಾನು ಗುರುತಿಸುತ್ತೇನೆ. ಈ ದಿನ ನ್ಯಾಯಾಲಯದಲ್ಲಿ 1 ಮತ್ತು 3ನೇ ಆರೋಪಿ ಹಾಜರಿರುತ್ತಾರೆ. 2ನೇ ಆರೋಪಿಯ ವಿರುದ್ಧ ಪ್ರಕರಣವು split up ಆಗಿರುತ್ತದೆ.

ನಾನು ಜೂನ್ 2014 ರಿಂದ ಆಗಸ್ಟ 2017 ರವರೆಗೂ ಪಿ ಎಸ್ ಐ ಆಗಿ ಕೋಡಿಹಳ್ಳಿ ಪೋಲೀಸ್ ಠಾಣೆಯನ್ನು ನನ್ನ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ.

ದಿಃ24.01.2015 ರಂದು ಬೆಳಿಗ್ಗೆ 11 ಗಂಟೆ ಸಮಯದಲ್ಲಿ ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರಿನ ಆಧಾರದ ಮೇರೆಗೆ ನಮ್ಮ ಠಾಣಾ ಮೊಕದ್ದಮೆ ಸಂಖ್ಯೆ 8/15 ರಂತೆ ಪ್ರ.ವ ವ ದಾಖಲಿಸಿ ಮೂಲ ದಾಖಲೆಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮತ್ತೊಂದು ಪ್ರತಿಯನ್ನು ಮೇಲಾಧಿಕಾರಿಗೆ ಸಲ್ಲಿಸಿರುತ್ತೇನೆ.

ನಂತರ ಅದೇ ದಿನ ಚಾಸಾ-1 ರವರು ಕೃತ್ಯ ನಡೆದ ಸ್ಥಳವಾದ ಕನಕಪುರ ತಾಲ್ಲೂಕು ಕೋಡಿಹಳ್ಳಿ-ಯಕ್ಕುಳ್ಳಿ -ಕಾಡುಶಿವನಹಳ್ಳಿ ರಸ್ತೆಯಲ್ಲಿರುವ ತಿಮ್ಮೇಗೌಡರ ಬಾಬ್ತು ಸರ್ವೆ ನಂ.18/1ಎ ರಲ್ಲಿ ಕಟ್ಟಿರುವ ಒಂಟಿ ಮನೆಯ ಬಳಿ ಪಂಚರಾದ ಚಾಸಾ-3 ಮತ್ತು 4 ರವರ ಸಮಕ್ಷಮ ಪಂಚನಾಮೆಯನ್ನು ಜರುಗಿಸಲಾಗಿರುತ್ತದೆ.

ನಂತರ ಪ್ರಸ್ತುತ ಪ್ರಕರಣವೂ ಘೋರ ಪ್ರಕರಣವಾದ ಕಾರಣ ಮುಂದಿನ ತನಿಖೆಗಾಗಿ ಚಾಸಾ-13 ರವರಿಗೆ ಕಡತವನ್ನು ನೀಡಿರುತ್ತೇನೆ.

ಸಾಕ್ಷಿಗೆ ಸದರಿ ಪ್ರಕರಣದ ದೂರನ್ನು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಸದರಿ ಪ್ರಕರಣದ ಪ್ರ.ವ ವ ವನ್ನು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಸದರಿ ಪ್ರಕರಣದ ಸ್ಥಳ ಪಂಚನಾಮೆಯನ್ನು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-3 ಎಂದು ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1 ಮತ್ತು 3ನೇ ಆರೋಪಿತರ ಪರ ವಕೀಲರಿಂದ**

ಚಾಸಾ-1 ರವರ ಜೊತೆ ಸದರಿ ದಿನ ಯಾರು ಯಾರು ಬಂದಿದ್ದರು ಎಂದು ಹೇಳಲಾಗುವುದಿಲ್ಲ ಆದರೆ ಚಾಸಾ-1 ರವರು ಬಂದಿರುತ್ತಾರೆ ನಿಪಿ-1 ನ್ನು ಅವರೇ ಬರೆದುಕೊಂಡು ಬಂದಿದ್ದರು. ನಿಪಿ-1 ನ್ನು ಚಾಸಾ-1 ರವರು ಬರೆದುಕೊಂಡು ಬಂದಿರಲಿಲ್ಲ ನಾವೇ ಬೇಕಾದ ರೀತಿಯಲ್ಲಿ ತಯಾರು ಮಾಡಿಸಿರುತ್ತೇವೆಂದರೆ ಸರಿಯಲ್ಲ. ನಾನು ಸ್ಥಳ ಪಂಚನಾಮೆಗೆ ಹೋದಾಗ ಪಂಚರಿಗೆ ನೋಟೀಸು ಕೊಟ್ಟಿರಲಿಲ್ಲ. ನಾನು ಠಾಣೆಯಿಂದ ಸದರಿ ದಿನ ಪ್ರ.ವ ವ ದಾಖಲಿಸಿದ ಮೇಲೆ ಸುಮಾರು 12 ಗಂಟೆಗೆ ಸ್ಥಳವನ್ನು ಬಿಟ್ಟಿರುತ್ತೇನೆ. ನಮ್ಮ ಠಾಣೆಯಿಂದ ಸದರಿ ಸ್ಥಳವೂ ಎಷ್ಟು ಅಂತರದಲ್ಲಿದೆ ಎಂದರೆ ಸಾಕ್ಷಿಯು

ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಸದರಿ ಸ್ಥಳಕ್ಕೆ ಸುಮಾರು 1 ಗಂಟೆ ಕಾಲ ಸಮಯಾವಕಾಶ ಬೇಕು ಎಂದರೆ ನನಗೆ ಈಗ ಸುಮಾರು ವರ್ಷವಾದ ಕಾರಣ ನೆನಪಿಲ್ಲ ಎಂದು ನುಡಿಯುತ್ತಾರೆ. ನಾನು ಸದರಿ ದಿನ ಸ್ಥಳಕ್ಕೆ ಹೋಗಿ ಯಾವುದೇ ಮಹಜರ್ ಮಾಡಿರುವುದಿಲ್ಲ ಠಾಣೆಯಲ್ಲೇ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗಳಿಗೂ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಕೇವಲ ಚಾಸಾ-1 ರವರು ಹೇಳಿದ ಮೇರೆಗೆ ರಾಜಕೀಯ ದ್ವೇಷವನ್ನು ಇಟ್ಟುಕೊಂಡು ಆರೋಪಿತರ ವಿರುದ್ದ ಸುಳ್ಳು ದೂರನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**